ಸ್ಮೈಲ್ ಪ್ಲೀಸ್ ಏಪ್ರಿಲ್ 1ರ ವಿಶೇಷ



# ಈ ಲೋಕದ ನಂಟಿಲ್ಲದ ಇ ಲೋಕದ ಜನಮೇಜಯರು...

■ ತುಮಕೂರು ಸಂಕೇತ್

ನಮ್ ಸುಬ್ರಾಮು ಇತ್ತೀಚೆಗೆ ತುಂಬಾ ಬದಲಾಗಿದ್ದಾನೆ. ಅದರಲ್ಲೂ 'ಫೋರ್ ಜಿ ಆ್ಯಂಡ್ರೈಡ್' ಮೊಬೈಲ್ ಕೈಗೆ ಸಿಕ್ಕ ಮೇಲಂತೂ ಯಾರ ಮಾತನ್ನು ನೇರವಾಗಿ ಕೇಳಿಸಿಕೊಳ್ಳೋದೇ ಇಲ್ಲ. ಯಾಕಂದ್ರೆ ಯಾವಾಗಲೂ ಕಿವಿಗೆ 'ಬ್ಲೂ ಟೂತ್' ಸಿಕ್ಕಿಸಿಕೊಂಡೇ ಇರ್ತಾನೆ. ಹಾಗೂ ಏನಾದರೂ ಅವನನ್ನು ಮಾತಾಡಿಸಲೇಬೇಕೆಂದರೆ ಅವನಿಗೆ ಫೋನ್ ಮಾಡ್ಬೇಕು, ಇಲ್ಲಾಂದ್ರೆ ವಾಟ್ಸ್ಆ್ಯಪ್ ಮೆಸೇಜ್ ಕಳಿಸ್ಬೇಕು.

ಅದೂ ಅಲ್ಲದೇ ಮೂರೂ ಹೊತ್ತು ಲ್ಯಾಪ್‌ಟಾಪ್ ಸಾನಿಧ್ಯದಲ್ಲೇ ಇರೋದು ರೂಢಿ ಮಾಡಿಕೊಂಡಿದ್ದಾನೆ. ಹೌದು, ಇದಕ್ಕೆ 'ಲ್ಯಾಪ್‌ಟಾಪ್' ಎಂದು ಹೆಸರಿದ್ದರೂ ಒಮ್ಮೆಯೂ ತೊಡೆಯ ಮೇಲೆ ಇಡಲೇ ಇಲ್ಲ. ಒಂದೋ ಟೇಬಲ್ ಮೇಲೆ ಕುಕ್ಕಿಕೊಂಡು ಅದೇನೋ ಕುಟ್ತಾ ಇರ್ತಾನೆ. ಇಲ್ಲಾಂದ್ರೆ ಬೆನ್ಮೇಲೆ ಹೊತ್ತು ತಿರುಗ್ತಾ ಇರ್ತಾನೆ! ಆದ್ರೆ ಎಮ್ಮೆನ್ಸಿಯಲ್ಲಿ ಕೆಲಸ ಮಾಡೋ ಮಹಿಳಾಮಣಿಗಳು ತಮ್ಮ ಪುಟಾಣಿಗಳನ್ನು ಸ್ಟ್ರೋಲರ್ನಲ್ಲಿ ತಳ್ಳಿ ತಮ್ಮ ತೊಡೆಯ ಮೇಲೆ ಈ 'ಲ್ಯಾಪ್‌ಟಾಪ್' ಅನ್ನೋದನ್ನು ಮುದ್ದಿನಿಂದ ಕೂರಿಸಿಕೊಂಡಿರ್ತಾರೆ. ವಿಶ್ವದ ಎಲ್ಲಾ ವಿಚಾರಗಳ ಸುದ್ದಿಗಳಿಗೆ ಕಣ್ಣು–ಕಿವಿ ಕೊಡುವ ಜನಮೇಜಯರು ತಮ್ಮ ಮನೆಯಲ್ಲಿನ ಸಣ್ಣಪುಟ್ಟ ವಿಷಯಗಳಿಗೂ ಸ್ಪಂದಿಸದೇ ಇರ್ತಾರೆ.

ಅದೂ ಅಲ್ಲದೇ ಇರೋದು ಭೂಮಿಯ ಮೇಲಾದರೂ ಆಕಾಶದಲ್ಲೇ ಹಾರಾಡ್ತಿರ್ತಾರೆ. ಅತಿ ಎತ್ತರದಲ್ಲಿರೋ ಉದ್ದುದ್ದ 'ಫ್ಲೈ ಓವರ್'ಗಳಲ್ಲಿ 'ಫ್ಲೈ' ಮಾಡ್ಕೊಂಡೇ ಹೋಗ್ತಾರೆ. ಯಾವಾಗಂದ್ರೆ ಆವಾಗ ಲ್ಯಾಪ್‌ಟಾಪ್ ಓಪನ್ ಮಾಡಿ 'ಸ್ಕೈ'ಪ್‌ನಲ್ಲಿಯೇ ವಿಹಾರಿಸುತ್ತಾ ಅಲ್ಲೇ ಕಳೆದುಹೋಗ್ತಾರೆ. ಅಲ್ಲೇನು ನಾರದರೋ, ಸುರಸುಂದರಿಯರೋ, ದೇವಾನುದೇವತೆಗಳೋ, ಯಾರ್ಯಾರು ಇರ್ತಾರೋ? ಯಾರಿಗೆ ಗೊತ್ತು?

ಯಾವುದೇ ಸಾಫ್ಟ್‌ವೇರ್ ಅನ್ನು ಓಪನ್ ಮಾಡಿದ್ರೂ ಕ್ಲೌಡ್ ಬೇಸ್ಡ್ ಆಗಿರುತ್ತೆ. ಎಲ್ಲವೂ ಕ್ಲೌಡ್ ಕಂಪ್ಯೂಟಿಂಗ್ನಲ್ಲೇ ಆಗ್ಬೇಕು. ಇಲ್ಲಿರುವುದು ಸುಮ್ಮನೆ ಅಲ್ಲಿರುವುದು ನಮ್ಮನೆ ಅಂತಾ ಯಾವಾಗಲೂ ಕ್ಲೌಡ್‌ನಲ್ಲೇ ಕೂತಿರ್ತಾರೆ. ಮೋಡಗಳನ್ನು ನೋಡುತ್ತಾ ಕವನ ಕಟ್ಟುವ ಕಾಲವೊಂದಿತ್ತು. ಈಗ ಅದೇ ಮೋಡದಲ್ಲೇ ಬ್ಯಾಂಕ್‌ನ ಲಾಕರ್ನಲ್ಲಿ ಇಟ್ಟಷ್ಟೇ ಜೋಪಾನವಾಗಿ ತಮ್ಮ ಅತ್ಯಮೂಲ್ಯವಾದ ಕಡತಗಳನ್ನು ತುಂಬಿಸಿಡ್ತಾರಂತೆ! ಎಲ್ಲಾ ಕೆಲಸ–ಕಾರ್ಯಗಳು ಕ್ಲೌಡ್ ಬೇಸ್ಡ್!

ನಮ್ಮ ರಸಿಕ ಕಾಳಿದಾಸ ಆ ಕಾಲದಲ್ಲೇ ಬುದ್ಧಿವಂತ ಅಭಿಯಂತರನೂ ಆಗಿದ್ದನೇನೋ ಯಾರು ಬಲ್ಲರು? ಆ ಕಾಲದಲ್ಲೇ 'ಮೇಘದೂತ' ಬರೆದಿದ್ದ. 'ಕ್ಲೌಡ್' ಕಂಪ್ಯೂಟಿಂಗ್, 'ಸ್ಕೈ'ಪ್ ಮೆಸೇಜ್‌ನ